# ಡೆವಲಪ್‌ಮೆಂಟ್ ಡೈಲಾಗ್ ಫೆ. 1ರಿಂದ

ವಿಜಯವಾಣಿ

ಹುಬ್ಬಳ್ಳಿ: ಇಲ್ಲಿನ ಬಿವಿಬಿ ಕಾಲೇಜು ಆವರಣದಲ್ಲಿರುವ ದೇಶಪಾಂಡೆ ಫೌಂಡೇಷನ್ ಸಭಾಂಗಣದಲ್ಲಿ ಫೆ. 1ರಿಂದ ಡವಲಪ್‌ಮೆಂಟ್ ಡೈಲಾಗ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಫೌಂಡೇಷನ್ ಸಂಸ್ಥಾಪಕ ಡಾ. ಗುರುರಾಜ ದೇಶಪಾಂಡೆ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ 'ಜೋಡಣೆ, ನಾವೀನ್ಯತೆ ಮತ್ತು ಪರಿಣಾಮ ಎನ್ನುವ ಧ್ಯೇಯವಾಕ್ಯದೊಂದಿಗೆ ಈ ಬಾರಿಯ ಡೈಲಾಗ್ ಆಯೋಜಿಸಿದ್ದೇವೆ. ಶಿಕ್ಷಣ, ಕೃಷಿ ಮತ್ತು ತಾಂತ್ರಿಕ ಕೌಶಲ ತರಬೇತಿಗೆ ಒತ್ತು ಕೊಡುವುದು ಮೂಲ ಉದ್ದೇಶವಾಗಿದೆ. ಈ ಮೂಲಕ ಯುವಕರನ್ನು ವಿದ್ಯಾರ್ಥಿ ಹಂತದಲ್ಲಿಯೇ ಪ್ರತಿಭಾವಂತರನ್ನಾಗಿ ಮಾಡುವ ಗುರಿ ಹೊಂದಲಾಗಿದೆ' ಎಂದರು.

'ಕಾರ್ಯಕ್ರಮದಲ್ಲಿ ತಜ್ಞರು, ನೀತಿ ನಿರೂಪಕರು ಪಾಲ್ಗೊಳ್ಳಲಿದ್ದಾರೆ. ಕೃಷಿಯ ಸಾಮರ್ಥ್ಯತೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮಹತ್ವದ ಬಗ್ಗೆ ಚರ್ಚೆ ನಡೆಯಲಿದೆ. ಫೆ. 1ರಂದು ಗೋಕುಲ ರಸ್ತೆಯಲ್ಲಿರುವ ಫೌಂಡೇಷನ್‌ನ ಸಭಾಂಗಣದಲ್ಲಿ ಯುವಜನತೆಯ ಜೊತೆ ತಜ್ಞರು ಚರ್ಚಿಸಲಿದ್ದಾರೆ. ಇನ್ಫೊಸಿಸ್ ಸಭಾಂಗಣದಲ್ಲಿ ಅದೇ ದಿನ ಸಂಜೆ ಜರುಗುವ 'ಇವನಿಂಗ್ ವಿತ್ ಲೆಜೆಂಡ್ಸ್' ಕಾರ್ಯಕ್ರಮದಲ್ಲಿ ಜಿಎಂಆರ್ ಸಮೂಹ ಅಧ್ಯಕ್ಷ ಮೋಹನದಾಸ್ ಪೈ ಪಾಲ್ಗೊಳ್ಳುವರು' ಎಂದು ತಿಳಿಸಿದರು.

ಫೌಂಡೇಷನ್‌ನ ಕೌಶಲ ವಿಭಾಗದ ಸಿಒಒ ಪಿ.ಎನ್. ನಾಯಕ್ ಮಾತನಾಡಿ 'ಫೆ. 2ರಂದು ಗೋಕುಲ ರಸ್ತೆಯ ಕ್ಯಾಂಪಸ್‌ನಲ್ಲಿ ಸ್ಟಾರ್ಟ್ ಅಪ್ ಡೈಲಾಗ್-2020 ನಡೆಯಲಿದೆ. ಅಲ್ಲಿ ಹೊಸ ಆವಿಷ್ಕಾರಗಳ ಬಗ್ಗೆ ತಿಳಿದುಕೊಳ್ಳಬಹುದು. ಅದೇ ದಿನ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಕೌಶಲ ಕೇಂದ್ರ ಉದ್ಘಾಟಿಸಲಿದ್ದಾರೆ' ಎಂದು ಹೇಳಿದರು.

ಫೌಂಡೇಷನ್ ಸಹ ಸಂಸ್ಥಾಪಕಿ ಡಾ. ಜಯಶ್ರೀ ದೇಶಪಾಂಡೆ, ಸಿಇಒ ವಿವೇಕ ಪವಾರ್, ಸ್ಟಾರ್ಟ್ ಅಪ್‌ನ ಸಿಇಒ ಸಿ.ಎಂ. ಪಾಟೀಲ ಇದ್ದರು.